# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಅಕ್ಷರ ದಾಸೋಹ ಕಾರ್ಯಕ್ರಮದಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆಯವರಿಗೆ ಅಪಘಾತ/ಮರಣ ಸಂಭವಿಸಿದ ಸಂದರ್ಭದಲ್ಲಿ ಪರಿಹಾರ ಮೊತ್ತ ಪರಿಷ್ಕರಣೆ ಬಗ್ಗೆ.

**ಓದಲಾಗಿದೆ :** 1) ಸರ್ಕಾರದ ಪತ್ರ ಸಂಖ್ಯೆ: ಇಡಿ 35 ಎಂಎಂಎಸ್ 2009, ದಿನಾಂಕ : 09.10.2009.
2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಅವರ ಪತ್ರ ಸಂ: ಎಂ2/ಅದಾ/ಅನಿಲ ಸಿಲಿಂಡರ್ ವಿಮೆ:25/2008–09 ದಿನಾಂಕ : 14.12.2009.

**ಪ್ರಸ್ತಾವನೆ :**

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಪತ್ರದಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮದಡಿ ಅಡುಗೆ ತಯಾರಿಸುವ ಸಂದರ್ಭದಲ್ಲಿ ಸಿಬ್ಬಂದಿಯವರಿಗೆ ಅಪಘಾತ/ಅವಘಡಗಳು ಸಂಭವಿಸಿದಲ್ಲಿ ವಿಮೆಗೆ ಒಳಪಡಿಸುವ ಬದಲು ಪರಿಹಾರ ನೀಡಲು ಕುರಿತಂತೆ ಕಂದಾಯ ಇಲಾಖೆಯಲ್ಲಿ ಅಳವಡಿಸಿರುವ ಆಮ್ ಆದ್ಮಿ ಭೀಮಾ ಯೋಜನೆಯಡಿ ಅಗತ್ಯ ಕ್ರಮ ತೆಗೆದುಕೊಳ್ಳಲು ತಿಳಿಸಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮದಡಿ ಅಡುಗೆ ತಯಾರಿಸುವವರು ತಾತ್ಕಾಲಿಕ ನೌಕರರಾಗಿದ್ದು, ಅವರ ಮಾಸಿಕ ಸಂಭಾವನೆಯು ಮುಖ್ಯ ಅಡುಗೆಯವರಿಗೆ ರೂ.800/– ಅಡುಗೆಯವರಿಗೆ ರೂ.550/– ಸಹಾಯಕ ಅಡುಗೆಯವರಿಗೆ ರೂ.500/–ಅಡುಗೆ ಸಹಾಯಕರು ರೂ.400/– ಗಳಾಗಿರುತ್ತದೆ. ಈ ಯೋಜನೆಯಲ್ಲಿ 40271 ಅಡುಗೆ ಕೇಂದ್ರಗಳು ಚಾಲ್ತಿಯಲ್ಲಿದ್ದು, ಒಟ್ಟು 99894 ಅಡುಗೆಯವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವರ್ಷದಲ್ಲಿ ಸರಾಸರಿ 4–5 ಪ್ರಕರಣಗಳು ಅಪಘಾತಕ್ಕೊಳಪಟ್ಟಿರುವುದು ಕಂಡು ಬಂದಿದೆ. ಈ ರೀತಿ ಒಂದು ವರ್ಷದಲ್ಲಿ 8 ರಿಂದ 10 ಅಪಘಾತ ಪ್ರಕರಣಗಳಾದರು ಸುಮಾರು ರೂ.10.00ಲಕ್ಷ ಖರ್ಚು ಬರುತ್ತದೆ. ಆಮ್ ಆದ್ಮಿ ಭೀಮಾ ಯೋಜನೆಯ ಪ್ರಕಾರ ವಿಮೆಗೆ ಒಳಪಡಿಸಿದಲ್ಲಿ ಇಲಾಖೆಯು ರೂ.99–89ಲಕ್ಷಗಳನ್ನು ವಿಮಾ ಇಲಾಖೆಗೆ ಪಾವತಿ ಮಾಡಬೇಕಾಗಿರುತ್ತದೆ.

ದಿನಾಂಕ : 17.03.2009ರಂದು ನಡೆದ ಸಿ.ಐ.ಟಿ.ಯ ಪದಾಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯದಂತೆ ಅಡುಗೆ ನೌಕರರಿಗೆ ಸೇವೆ ಸಲ್ಲಿಸುತ್ತಿರುವ ಸಂದರ್ಭದಲ್ಲಿ ಅಪಘಾತ/ಮರಣ ಸಂಭವಿಸಿದಾಗ ಪರಿಹಾರದ ಮೊತ್ತವನ್ನು ಕೆಳಕಂಡಂತೆ ಸಲ್ಲಿಸಿರುತ್ತಾರೆ.

| ಕ್ರ. ಸಂ. | ಅಪಘಾತದ ವಿವರ | ಪರಿಹಾರ ಮೊತ್ತ |
|---|---|---|
| 1 | ಅಡುಗೆಯವರು ಕರ್ತವ್ಯದ ಅವಧಿಯಲ್ಲಿ ಸುಟ್ಟ ಗಾಯವಾಗಿ ಅನಂತರ ಮರಣ ಹೊಂದಿದಲ್ಲಿ ಈ ಬಗ್ಗೆ ಸಂಬಂಧಿಸಿದ ಸರ್ಕಾರಿ ಆಸ್ಪತ್ರೆಗಳಲ್ಲಿ ಅಥವಾ ಸರ್ಕಾರದ ಅಂಗೀಕೃತ ಆಸ್ಪತ್ರೆಗಳಲ್ಲಿ ದಾಖಲಾಗಿ ಮರಣ ಸಂಭವಿಸಿದ ಪ್ರಕರಣಗಳಿಗೆ | ರೂ.1,00,000/– |
| 2 | ಕರ್ತವ್ಯದ ಅವಧಿಯಲ್ಲಿ ಶಾಶ್ವತ ಅಂಗವಿಕಲತೆ ಉಂಟಾದಲ್ಲಿ ಸರ್ಕಾರಿ ಜಿಲ್ಲಾ ಆಸ್ಪತ್ರೆ ಅಥವಾ ತಾಲ್ಲೂಕು ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳ ಶಾಶ್ವತ ಅಂಗವಿಕಲತೆ ಬಗ್ಗೆ ಪಡೆದ ದೃಢೀಕರಣದ ಆಧಾರದ ಮೇಲೆ ಪರಿಹಾರ ಮೊತ್ತ ಪಾವತಿಸಬಹುದು | ರೂ.75,000/– (ಗರಿಷ್ಠ ಮೊತ್ತ) |

| | | |
|---|---|---|
| 3 | ಅಡುಗೆ ಕರ್ತವ್ಯದ ಅವಧಿಯಲ್ಲಿ ಸುಟ್ಟ ಗಾಯವಾಗಿ ಸಂಬಂಧಿಸಿದ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ದಾಖಲಾದ ಪ್ರಕರಣಗಳಲ್ಲಿ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ಅಥವಾ ಸರ್ಕಾರದ ಅಂಗೀಕೃತ ಆಸ್ಪತ್ರೆಗಳ ವೈದ್ಯರಿಂದ ವೈದ್ಯಕೀಯ ದೃಢೀಕರಣ ಪತ್ರದ ಆಧಾರದ ಮೇಲೆ ವೈದ್ಯಕೀಯ ವೆಚ್ಚ ಭರಿಸಬಹುದು | ರೂ.30,000/- |

ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಇಡಿ 92 ಎಂಎಂಎಸ್ 2009 ಬೆಂಗಳೂರು, ದಿನಾಂಕ: 22-02-2010**
**[ಇಡಿ 26 ಸ್ಕೀಮರ (ಯುನಿಕ್) 2010, ದಿನಾಂಕ: 22-02-2010]**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮದಡಿ ಅಡುಗೆ ತಯಾರಿಸುವ ಸಂದರ್ಭದಲ್ಲಿ ಸಿಬ್ಬಂದಿಯವರಿಗೆ ಅಪಘಾತ/ಅವಘಡಗಳು ಸಂಭವಿಸಿದಲ್ಲಿ ಈ ಕೆಳಕಂಡಂತೆ ಪರಿಹಾರದ ಮೊತ್ತವನ್ನು ಮಂಜೂರು ಮಾಡಿ ಆದೇಶಿಸಿದೆ.

| ಕ್ರ. ಸಂ. | ಅಪಘಾತದ ವಿವರ | ಪರಿಹಾರ ಮೊತ್ತ |
|---|---|---|
| 1 | ಅಡುಗೆಯವರು ಕರ್ತವ್ಯದ ಅವಧಿಯಲ್ಲಿ ಸುಟ್ಟ ಗಾಯವಾಗಿ ಅನಂತರ ಮರಣ ಹೊಂದಿದಲ್ಲಿ ಈ ಬಗ್ಗೆ ಸಂಬಂಧಿಸಿದ ಸರ್ಕಾರಿ ಆಸ್ಪತ್ರೆಗಳಲ್ಲಿ ಅಥವಾ ಸರ್ಕಾರದ ಅಂಗೀಕೃತ ಆಸ್ಪತ್ರೆಗಳಲ್ಲಿ ದಾಖಲಾಗಿ ಮರಣ ಸಂಭವಿಸಿದ ಪ್ರಕರಣಗಳಿಗೆ | ರೂ.1,00,000/- |
| 2 | ಕರ್ತವ್ಯದ ಅವಧಿಯಲ್ಲಿ ಶಾಶ್ವತ ಅಂಗವಿಕಲತೆ ಉಂಟಾದಲ್ಲಿ ಸರ್ಕಾರಿ ಜಿಲ್ಲಾ ಆಸ್ಪತ್ರೆ ಅಥವಾ ತಾಲ್ಲೂಕು ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳ ಶಾಶ್ವತ ಅಂಗವಿಕಲತೆ ಬಗ್ಗೆ ಪಡೆದ ದೃಢೀಕರಣದ ಆಧಾರದ ಮೇಲೆ ಪರಿಹಾರ ಮೊತ್ತ ಪಾವತಿಸಬಹುದು | ರೂ.75,000/- (ಗರಿಷ್ಠ ಮೊತ್ತ) |
| 3 | ಅಡುಗೆ ಕರ್ತವ್ಯದ ಅವಧಿಯಲ್ಲಿ ಸುಟ್ಟ ಗಾಯವಾಗಿ ಸಂಬಂಧಿಸಿದ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ದಾಖಲಾದ ಪ್ರಕರಣಗಳಲ್ಲಿ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ಅಥವಾ ಸರ್ಕಾರದ ಅಂಗೀಕೃತ ಆಸ್ಪತ್ರೆಗಳ ವೈದ್ಯರಿಂದ ವೈದ್ಯಕೀಯ ದೃಢೀಕರಣ ಪತ್ರದ ಆಧಾರದ ಮೇಲೆ ವೈದ್ಯಕೀಯ ವೆಚ್ಚ ಭರಿಸಬಹುದು | ರೂ.30,000/- |

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 49 ವೆಚ್ಚ-8 2010 ದಿನಾಂಕ : 03.02.2010ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
(ಬಿ.ಎಚ್.ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ).
22.2.2010

ಇವರಿಗೆ :

1. ಮಹಾಲೇಖಪಾಲರು, ಕರ್ನಾಟಕ(ಆಡಿಟ್ 1 ಮತ್ತು 2 ), ಬೆಂಗಳೂರು.

2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಗುಲ್ಬರ್ಗಾ/ಧಾರವಾಡ.
3. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು.
4. ಉಪ ನಿರ್ದೇಶಕರು ಖಜಾನೆ (ಎನ್.ಎಮ್.ಸಿ), ಖನಿಜ ಭವನ, ನಂ.45, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
6. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ (ಆಯುಕ್ತರ ಮೂಲಕ)
8. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ (ಆಯುಕ್ತರ ಮೂಲಕ)
9. ರಾಜ್ಯದ ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳಿಗೆ (ಆಯುಕ್ತರ ಮೂಲಕ)
10. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿಗಳು-2, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
12. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ-8, ಆರ್ಥಿಕ ಇಲಾಖೆ, ಬೆಂಗಳೂರು.
13. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ),ಶಿಕ್ಷಣ ಇಲಾಖೆಯ ಅವರ ಆಪ್ತ ಕಾರ್ಯದರ್ಶಿಗಳು.
13. ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
14. ಮಾಸಿಕ ಸಂಕಲನ/ ಸಾಪ್ತಾಹಿಕ ರಾಜ್ಯ ಪತ್ರ.
15. ಹೆಚ್ಚುವರಿ ಪ್ರತಿಗಳು/ ಶಾಖಾ ರಕ್ಷಾ ಕಡತ.

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1**

ಎಂ:2/ಅ.ದಾ/ಅನಿಲ ಸಿಲಿಂಡರ್ ವಿಮೆ:25/2006-07, ದಿನಾಂಕ:29.04.2010

ಮೇಲ್ಕಂಡ ಸರ್ಕಾರಿ ಆದೇಶದನ್ವಯ ಅಕ್ಷರ ದಾಸೋಹ ಕಾರ್ಯಕ್ರಮದಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆಯವರಿಗೆ ಅಪಘಾತ / ಮರಣ ಸಂಭವಿಸಿದ ಸಂದರ್ಭದಲ್ಲಿ ಪರಿಹಾರ ಮೊತ್ತ ನೀಡುವ ಬಗ್ಗೆ ಆದೇಶವಾಗಿದ್ದು, ದಿನಾಂಕ:22.04.2010ರ ಲೆಕ್ಕಶೀರ್ಷಿಕೆ ಸೇರ್ಪಡೆ ಆದೇಶವನ್ನು ಈ ಪತ್ರದೊಡನೆ ಲಗತ್ತಿಸುತ್ತಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸರ್ಕಾರಿ ಆದೇಶದಂತೆ ಸೂಕ್ತ ಕ್ರಮ ಕೈಗೊಳ್ಳಲು ಕೋರಲಾಗಿದೆ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

ಗೆ:
1. ರಾಜ್ಯದ ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಛೇರಿ, ಇವರಿಗೆ ಮಾಹಿತಿಗೆ ಹಾಗೂ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮಾಹಿತಿಗೆ ಹಾಗೂ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು, ಜಿಲ್ಲಾ ಖಜಾನೆ, ಇವರಿಗೆ ಮಾಹಿತಿಗಾಗಿ
4. ರಾಜ್ಯದ ಎಲ್ಲಾ ಜಿಲ್ಲಾ ಶಿಕ್ಷಣಾಧಿಕಾರಿಗಳು(ಅ.ದಾ) ಇವರಿಗೆ ಕ್ರಮಕ್ಕಾಗಿ.
5. ಸಹಾಯಕ ನಿರ್ದೇಶಕರು(ಅ.ದಾ) ಇವರಿಗೆ ಮಾಹಿತಿಗಾಗಿ.
6. ಕಛೇರಿ ಪ್ರತಿ.

# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 92 ಎಂಎಂಎಸ್ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 22.04.2010

## ಸೇರ್ಪಡೆ ಆದೇಶ

**ವಿಷಯ :** ಅಕ್ಷರ ದಾಸೋಹ ಕಾರ್ಯಕ್ರಮಡಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆಯವರಿಗೆ ಅಪಘಾತ/ಮರಣ ಸಂಭವಿಸಿದ ಸಂದರ್ಭದಲ್ಲಿ ಪರಿಹಾರ ಮೊತ್ತ ಪರಿಷ್ಕರಣೆ ಬಗ್ಗೆಯ ಆದೇಶಕ್ಕೆ ಸೇರ್ಪಡೆ ಮಾಡುವ ಬಗ್ಗೆ.

**ಉಲ್ಲೇಖ :-** ಸರ್ಕಾರದ ಆದೇಶ ಸಂಖ್ಯೆ: ಇಡಿ 92 ಎಂಎಂಎಸ್ 2009 ದಿನಾಂಕ: 22.02.2010.

---

ಸರ್ಕಾರದ ಆದೇಶ ಸಂಖ್ಯೆ: ಇಡಿ 92 ಎಂಎಂಎಸ್ 2009 ದಿನಾಂಕ: 22.02.2010ರ ಆದೇಶ ಭಾಗದಲ್ಲಿ ಈ ಕೆಳಕಂಡಂತೆ ಪರಿಹಾರ ಮೊತ್ತವನ್ನು ಮಂಜೂರು ಮಾಡಿ ಆದೇಶಿದೆ ಎಂಬ ಪದಗಳ ನಂತರ ಸದರಿ ಮೊತ್ತವನ್ನು ಅಕ್ಷರ ದಾಸೋಹ **ಲೆಕ್ಕ ಶೀರ್ಷಿಕೆ 2202-01-800-1-35**ಯಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಖರ್ಚು ಭರಿಸುವುದು ಎಂದು ಸೇರ್ಪಡೆ ಮಾಡಿ ಓದಿಕೊಳ್ಳತಕ್ಕದ್ದು.

ಉಳಿದ ಅಂಶಗಳು ಯಥಾವತ್ತಾಗಿ ಮುಂದುವರಿಯುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

26/4

(ಪಿ.ಎಫ್. ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ).
22-4-2010

ಇವರಿಗೆ :

1. ಮಹಾಲೇಖಪಾಲರು, ಕರ್ನಾಟಕ(ಆಡಿಟ್ 1 ಮತ್ತು 2 ), ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಗುಲ್ಬರ್ಗಾ/ಧಾರವಾಡ.
3. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು.
4. ಉಪ ನಿರ್ದೇಶಕರು ಖಜಾನೆ (ಎನ್.ಎಮ್.ಸಿ), ಖನಿಜ ಭವನ, ನಂ.45, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
6. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ (ಆಯುಕ್ತರ ಮೂಲಕ)
8. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ (ಆಯುಕ್ತರ ಮೂಲಕ)
9. ರಾಜ್ಯದ ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳಿಗೆ (ಆಯುಕ್ತರ ಮೂಲಕ)

10. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬೆಂಗಳೂರು.

11. ಸರ್ಕಾರದ ಉಪ ಕಾರ್ಯದರ್ಶಿಗಳು-2, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.

12. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ-8, ಆರ್ಥಿಕ ಇಲಾಖೆ, ಬೆಂಗಳೂರು.

13. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ),ಶಿಕ್ಷಣ ಇಲಾಖೆಯ ಅವರ ಆಪ್ತ ಕಾರ್ಯದರ್ಶಿಗಳು.

13. ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ (ಇ1-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.

14. ಮಾಸಿಕ ಸಂಕಲನ/ ಸಾಪ್ತಾಹಿಕ ರಾಜ್ಯ ಪತ್ರ.

15. ಹೆಚ್ಚುವರಿ ಪ್ರತಿಗಳು/ ಶಾಖಾ ರಕ್ಷಾ ಕಡತ.